ಅಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 2 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

[ಸದನವನ್ನು ಬೆಳಿಗೆ 11.42 ಗಂಟೆಗೆ ಮುಂದೂಡಲಾಯಿತು. ಸದನವು ಪುನ: ಮಧ್ಯಾಹ್ನ 2 ಗಂಟೆಗೆ ಸೇರಲು ತೀರ್ಮಾನಿಸಿತು]

(ಸದನವು ಪುನ: ಮಧ್ಯಾಹ್ನ 2-58 ಗಂಟೆಗೆ ಪ್ರಾರಂಭವಾಯಿತು)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

(ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿಯನ್ನು ಮುಂದುವರೆಸಿದ್ದರು)

ಅಧ್ಯಕ್ಷರು: ಕೊನೆಯದಾಗಿ ಎಲ್ಲರಲ್ಲೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್(ತಮ್ಮ ಸ್ಥಾನದಿಂದ): ಮಾನ್ಯ ಅಧ್ಯಕ್ಷರೆ, ನಮ್ಮ ಕಡೆ ಸ್ವಲ್ಪ ನೋಡಿ. ಒಂದೆರಡು ಬಿಲ್ಲುಗಳಲ್ಲ 12 ಬಿಲ್ಲುಗಳು ಎಂದರೆ ಹೇಗೆ?

(ಗೊಂದಲ)

6. ಪ್ರಕಟಣೆ

ಅಧ್ಯಕ್ಷರು: ಮಾನ್ಯ ಸಭಾಪತಿಯವರಿಂದ ಈ ಕೆಳಗಿನ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯಿಂದ ಅಂಗೀಕೃತಗೊಂಡ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳಿಗೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 16.07.2010ರಂದು ಯಾವುದೇ ತಿದ್ದುಪಡಿಯಿಲ್ಲದೇ ಅನುಮೋದಿಸಿರುತ್ತದೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1) ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ 2010
2) ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ, 2010
3) ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2010
4) ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ, 2010
5) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2010
6) ಕರ್ನಾಟಕ ಹೆದ್ದಾರಿಗಳ (ತಿದ್ದುಪಡಿ) ವಿಧೇಯಕ, 2010
7) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2010
8) ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ, 2010

9) ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2010
10) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2010
11) ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ವಿಧೇಯಕ, 2010

7. ಕರ್ನಾಟಕ ವಿಧಾನ ಮಂಡಲದ ಮತ್ತು ವಿಧಾನಸಭೆಯ ಸಮಿತಿಗಳ ಪುನರ್ ರಚನೆ ಬಗ್ಗೆ ಪ್ರಸ್ತಾವನೆ

ಶ್ರೀ ಎಸ್. ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 28-09-2010ರಂದು ವಿಧಾನಮಂಡಲದ ಹಾಗೂ ವಿಧಾನಸಭೆಯ ವಿವಿಧ ಸಮಿತಿಗಳ ಕಾಲಾವಧಿ ಮುಗಿಯಲಿದ್ದು, 2010-11ನೇ ಸಾಲಿಗೆ ಸಮಿತಿಗಳನ್ನು ಪುನರ್‌ರಚಿಸಲು ಮಾನ್ಯ ಸಭಾಧ್ಯಕ್ಷರಿಗೆ ಪೂರ್ಣ ಅಧಿಕಾರವನ್ನು ಈ ಸದನವು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಂಡಿಸಿರುವ ಪ್ರಸ್ತಾವನೆಗೆ ಸದನದ ಸಹಮತಿ ಇದೆಯೆಂದು ಭಾವಿಸುತ್ತೇನೆ.

(ಗೊಂದಲ)

8. ಅಧ್ಯಕ್ಷರ ಅಪ್ಪಣೆ ಮೇರೆಗೆ:

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಶ್ರೀಮತಿ ಮೋಟಮ್ಮನವರ ವಿರುದ್ಧ ಹಕ್ಕುಚ್ಯುತಿ ಪ್ರಸ್ತಾವ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್(ಮಡಿಕೇರಿ): ವಿಧಾನಸಭೆಯ ಅಧ್ಯಕ್ಷರ ಮೇಲೆ ವಿಧಾನಪರಿಷತ್ತಿನ, ಮೇಲ್ಮನೆಯ ವಿರೋಧ ಪಕ್ಷದ ನಾಯಕಿಯಾದ ಶ್ರೀಮತಿ ಮೋಟಮ್ಮನವರ ಹಕ್ಕುಚ್ಯುತಿ ಮಾಡಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರ ಈ ಸ್ಥಾನ ಬಹಳ ಉನ್ನತವಾದ ಸ್ಥಾನ. ಅಧ್ಯಕ್ಷರು ಯಾರೇ ಇರಲಿ, ಇವತ್ತು ತಾವಿರಬಹುದು, ನಾಳೆ ಇನ್ನೊಬ್ಬರು ಬರಬಹುದು. ಇದುವರೆಗೆ ಬಹಳಷ್ಟು ವಿಧಾನಸಭೆಯ ಅಧ್ಯಕ್ಷರುಗಳು ಬಂದು ಹೋಗಿದ್ದಾರೆ. ಅಧ್ಯಕ್ಷರ ಮತ್ತು ಅವರ ನಿರ್ಣಯಕ ಬಗ್ಗೆ ಮೇಲ್ಮನೆಯ ವಿರೋಧ ಪಕ್ಷದ ನಾಯಕಿಯಾದ ಶ್ರೀಮತಿ ಮೋಟಮ್ಮನವರು ಅಗೌರವದ ರೀತಿಯಲ್ಲಿ